ಕಾರ್ಯದರ್ಶಿ
ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ಫೆಡರೇಶನ್ ಹೌಸ್, ಎಫ್.ಕೆ.ಸಿ.ಸಿ.ಐ. ಕಟ್ಟಡ
3ನೇ ಮಹಡಿ, ಕೆ.ಜಿ. ರಸ್ತೆ,
ಬೆಂಗಳೂರು-560009
ದೂ.ಸಂ. & ಫ್ಯಾಕ್ಸ್ : 080-22352044
ಇ-ಮೇಲ್ : secretarygadi@karnataka.gov.in
kbada6666@gmail.com
ಅಂತರ್ಜಾಲ : https://kbada.karnataka.gov.in

SECRETARY
Karnataka Border Area Development Authority
Federation House, FKCCI-Building
3rd Floor, K.G. Road
Bengaluru-560009
Fax & Ph : 080-22352044
E-mail: secretarygadi@karnataka.gov.in
kbada6666@gmail.com
Website: https://kbada.karnataka.gov.in

ಸಂಖ್ಯೆ:ಕಗಪ್ರಅಪ್ರಾ/63/ಭಾಗ-2/ಆ/2021-22 ದಿನಾಂಕ: 30.03.2022

## ಕಛೇರಿ ಅಧಿಕೃತ ಜ್ಞಾಪನ

ವಿಷಯ: ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಮೀಕ್ಷೆ-2021ರ "ಪೈಲಟ್ ಸರ್ವೆ" ಬಗ್ಗೆ.

ಉಲ್ಲೇಖ: (1) ಗಡಿ ಪ್ರಾಧಿಕಾರದ ಸರ್ಕಾರದಿಂದ ಅನುಮೋದಿತ ಕ್ರಿಯಾಯೋಜನೆ ಸಂಖ್ಯೆ ಕಸಂವಾ 68 ಕೆಬಿಎಲ್ ಆಕ 2021, ಬೆಂಗಳೂರು, ದಿನಾಂಕ:01.06.2021.

(2) ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆಯ ನಡವಳಿ ದಿನಾಂಕ:16.07.2021 ಹಾಗೂ ದಿನಾಂಕ: 22.09.2021 ಹಾಗೂ 14.03.2022.

ಪ್ರಸ್ತಾವನೆ :-

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ನೆರರಾಜ್ಯಗಳಾದ ಮಹಾರಾಷ್ಟ್ರ, ಗೋವಾ, ಕೇರಳ, ತಮಿಳುನಾಡು ಹಾಗೂ ಆಂಧ್ರ, ತೆಲಂಗಾಣ ರಾಜ್ಯಗಳ ಗಡಿ ಭಾಗಗಳನ್ನು ಹೊಂದಿದ್ದು, 19 ಜಿಲ್ಲೆ ಮತ್ತು 63 ಗಡಿ ತಾಲ್ಲೂಕುಗಳ ವ್ಯಾಪ್ತಿಯನ್ನು ಹೊಂದಿದೆ. ಈ ಪ್ರದೇಶದಲ್ಲಿರುವ ರಾಜ್ಯದ ಜನರು ಹಲವಾರು ಜಲ್ವಂತ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಉದ್ದೇಶಗಳಿಗೆ ಹೊರ ರಾಜ್ಯ ಮತ್ತು ಒಳರಾಜ್ಯಗಳೆರಡನ್ನು ಅವಲಂಭಿಸಬೇಕಾಗಿದ್ದು, ಇದರಿಂದ ಶೈಕ್ಷಣಿಕ ಸೌಲಭ್ಯಗಳಾದ, ಶಾಲಾ ಕೊಠಡಿ ನಿರ್ಮಾಣ, ದುಸ್ಥಿತಿಯಲ್ಲಿರುವ ಶಾಲಾ ಕಟ್ಟಡ ನಿರ್ಮಾಣ, ಗ್ರಂಥಾಲಯ, ಶಾಲಾ ಕಾಂಪೌಂಡ್, ಶೌಚಾಲಯ, ಶುದ್ಧ ಕುಡಿಯುವ ನೀರಿನ ಘಟಕ, ಇತರೆ ಅಭಿವೃದ್ಧಿಗಳಿಗೆ ಸಮಗ್ರ ಮತ್ತು ಸುಸ್ಥಿರ ಅಭಿವೃದ್ಧಿ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಭಾಗದ ಜನರ ಸಾಂಸ್ಕೃತಿಕ ಬದುಕುಗಳಾದ ನಾಟಕ, ಜಾನಪದ, ನೃತ್ಯ, ಯಕ್ಷಗಾನ, ಲಾವಣಿ, ಬಯಲಾಟ, ತೊಗಲುಗೊಂಬೆ ಇತ್ಯಾದಿಗಳನ್ನು ಸಂರಕ್ಷಿಸುವುದರ ಜೊತೆಗೆ ಇವುಗಳ ಅಭಿವೃದ್ಧಿಗೆ ಉತ್ತೇಜನ ನೀಡಬೇಕಾಗಿದೆ.

ಈ ಹಿನ್ನಲೆಯನ್ನು ಗಮನಿಸಿ ರಾಜ್ಯದ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳನ್ನು ಬಳಸಿಕೊಂಡು ಕನ್ನಡ ಭಾಷೆ, ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅವಶ್ಯಕತೆಗಳನ್ನು ಖುದ್ದು ಸ್ಥಳ ಪರಿಶೀಲನೆ ಮಾಡಿ, ಸಮೀಕ್ಷೆ ಕಾರ್ಯ ನಿರ್ವಹಿಸಿ, ಮಾಹಿತಿಗಳನ್ನು ಕಲೆಹಾಕಲು ಗಡಿ ಪ್ರಾಧಿಕಾರವು ತೀರ್ಮಾನಿಸಿದ್ದು, ಇದರಂತೆ, 19 ಜಿಲ್ಲೆ ಮತ್ತು 63 ತಾಲ್ಲೂಕುಗಳ ಸಮಗ್ರ ಸಮೀಕ್ಷೆ ಕಾರ್ಯ ಆರಂಭಿಸುವ ಪೂರ್ವ ಪ್ರತಿ ಗಡಿ ತಾಲ್ಲೂಕಿನ ಆಸುಪಾಸಿನಲ್ಲಿರುವ ಎರಡು ಗ್ರಾಮವನ್ನು ಆಯ್ಕೆ ಮಾಡಿ ಪೈಲಟ್ ಸರ್ವೆ ನಡೆಸಲು ಅಂದಾಜಿಸಿದ್ದು, ಈ ಬಗ್ಗೆ Pilot Survey ನಿರ್ವಹಿಸಲು ಅನುಕೂಲವಾಗುವಂತೆ ಪ್ರತಿ ಜಿಲ್ಲೆಯ ಎರಡು ಗಡಿ ಗ್ರಾಮಗಳಿಗೆ ಸರ್ವೆ ಕಾರ್ಯಕ್ಕೆ ಅಗತ್ಯವಾದ ಅಂದಾಜು ವೆಚ್ಚ ರೂ.30000/-ಗಳನ್ನು ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ರವರು ಸಲ್ಲಿಸಿದ್ದು, ಇದೇ ಮಿತಿಯ ಮೊತ್ತವನ್ನು ಎಲ್ಲಾ ಗಡಿ ಜಿಲ್ಲೆಗಳಿಗೆ ಅನ್ವಯವಾಗುವಂತೆ ಹಂಚಿಕೆ ಮಾಡಲು ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರುಗಳ ಬ್ಯಾಂಕ್ ಖಾತೆ ಮತ್ತು ಐ.ಎಫ್.ಎಸ್.ಸಿ ವಿವರಗಳಿಗೆ ಅನುದಾನವನ್ನು ಬಿಡುಗಡೆ ಮಾಡಲು ತೀರ್ಮಾನಿಸಿದ್ದು ಅದರಂತೆ ಗಡಿ ಭಾಗದಲ್ಲಿ ಕೆಳಕಂಡ ಆದೇಶ ಹೊರಡಿಸಿದೆ.

## ಆದೇಶ ಸಂಖ್ಯೆ: ಕಗಪ್ರಅಪ್ರಾ/63/ಭಾಗ-2/ಆ/2021-22, ದಿನಾಂಕ: 30.03.2022.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಕೆಳಕಂಡ ವಿಶ್ವವಿದ್ಯಾನಿಲಯಗಳಿಗೆ "ಪೈಲಟ್ ಸರ್ವೆ" ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ 2021-22ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಹಂಚಿಕೆ ಮಾಡಿದ್ದು, ಸರ್ವೆ ಕಾರ್ಯವನ್ನು ಮೇ-2022ರ ಮೊದಲವಾರದಲ್ಲಿ ಆರಂಭಿಸಿ, ಸರ್ವೆ ಕಾರ್ಯಕ್ಕೆ

ನಿಗದಿಪಡಿಸಿರುವ ನಮೂನೆಯಲ್ಲಿ ಮಾಹಿತಿಯನ್ನು ಕಲೆಹಾಕಿ, ಭರ್ತಿ ಮಾಡಿದ ಪ್ರತಿ ಜಿಲ್ಲೆಯ ಎರಡು ಗ್ರಾಮಗಳ ಷೆಡ್ಯೂಲ್‌ಗಳನ್ನು ಮೇಲ್ವಿಚಾರಕರ ಪರಿಶೀಲನೆಯೊಂದಿಗೆ ದಿನಾಂಕ:25.05.2022ರ ಒಳಗೆ ರಿಜಿಸ್ಟ್ರಾರ್, ಹಂಪಿ ಕನ್ನಡ ವಿಶ್ವವಿದ್ಯಾನಿಲಯ, ದಾರವಾಡರವರಿಗೆ ಸಲ್ಲಿಸಿ, ಸ್ವೀಕೃತಿ ಪಡೆದುಕೊಳ್ಳುವುದು ಈ ಬಗ್ಗೆ ತೆಗೆದುಕೊಂಡ ಕ್ರಮವನ್ನು ಪ್ರಾಧಿಕಾರಕ್ಕೆ ಮಾಹಿತಿ ಒದಗಿಸುವುದು.

ಹಂಪಿ ಕನ್ನಡ ವಿಶ್ವವಿದ್ಯಾನಿಲಯ, ರವರಿಗೆ 19 ಜಿಲ್ಲೆಗಳ ಸರ್ವೆಯ ನಂತರ ಭರ್ತಿ ಮಾಡಿದ ಷೆಡ್ಯೂಲ್‌ಗಳ ಮಾಹಿತಿಯನ್ನು ಕ್ರೋಢೀಕರಿಸಿ ಜಿಲ್ಲಾವಾರು ವಿಶ್ಲೇಷಣಾತ್ಮಕ ವರದಿಯನ್ನು ತಯಾರಿಸುವ ಬಗ್ಗೆ ಜವಾಬ್ದಾರಿಯನ್ನು ನೀಡಿದ್ದು, ಏಪ್ರಿಲ್ ಮಾಹೆಯ ಒಳಗೆ ಎಲ್ಲಾ ಷೆಡ್ಯೂಲ್‌ಗಳನ್ನು ತಲುಪಿಸುವ ಜವಾಬ್ದಾರಿಯು ಆಯಾ ವಿಶ್ವವಿದ್ಯಾನಿಲಯಗಳದ್ದಾಗಿರುತ್ತದೆ.

**ಗಡಿ ಜಿಲ್ಲೆಯ ತಾಲ್ಲೂಕು ಹಾಗೂ ಎರಡು ಗಡಿ ಗ್ರಾಮಗಳನ್ನು ತಮ್ಮ ಹಂತದಲ್ಲಿಯೇ ಆಯ್ಕೆ ಮಾಡುವುದು. ಆಯ್ಕೆ ಮಾಡಲಾದ ಗ್ರಾಮಗಳಲ್ಲಿ ಕಡ್ಡಾಯವಾಗಿ ಸರ್ಕಾರಿ ಶಾಲೆ ಮತ್ತು ಅಂಗನವಾಡಿ ಇತರ ಸರ್ಕಾರಿ ಸಂಸ್ಥೆಗಳು ಕಾರ್ಯನಿರ್ವಹಣೆಯಲ್ಲಿರುವುದನ್ನು ದೃಢಪಡಿಸಿಕೊಂಡು ಸರ್ವೆ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳುವುದು.**

| ಕ್ರ ಸಂ | ಜಿಲ್ಲೆ | ಬಿಡುಗಡೆ ಮಾಡಲಾದ ಅನುದಾನ | ಪೈಲಟ್ ಸರ್ವೆ ಕಾರ್ಯಕ್ಕೆ ನಿಯೋಜಿಸಲಾದ ವಿಶ್ವವಿದ್ಯಾನಿಲಯ | ಅನುದಾನ ಬಿಡುಗಡೆ ಮಾಡಿದ ಬ್ಯಾಂಕ್ ಖಾತೆ ವಿವರ | ಸರ್ವೆ ಮುಖ್ಯಸ್ಥರು |
|---|---|---|---|---|---|
| 1 | ಬೆಂಗಳೂರು (ನ) | 30000/= | ಬೆಂಗಳೂರು ವಿಶ್ವವಿದ್ಯಾನಿಲಯ, ಜ್ಞಾನ ಭಾರತಿ ಬೆಂಗಳೂರು. | ಒಟ್ಟು ರೂ.90000/=ಗಳನ್ನು ಫೈನಾನ್ಸ್ ಆಫೀಸರ್, ಬೆಂಗಳೂರು ವಿಶ್ವವಿದ್ಯಾನಿಲಯ ಜ್ಞಾನ ಭಾರತಿ, ಬೆಂಗಳೂರು, ಇವರ ಮೂಲಕ ಚೆಕ್ ಸಂಖ್ಯೆ:224430 ದಿನಾಂಕ:30.03.2022ನ್ನು, ಫೈನಾನ್ಸ್ ಆಫೀಸರ್, ಬೆಂಗಳೂರು ವಿಶ್ವವಿದ್ಯಾನಿಲಯ ಜ್ಞಾನ ಭಾರತಿ, ಬೆಂಗಳೂರು, ಇವರಿಗೆ ಚೆಕ್ ಮೂಲಕ ನೀಡಲಾಗಿದೆ. | ಡಾ.ಸಿ. ಸೋಮಶೇಖರ್ |
| 2 | ರಾಮನಗರ | 30000/= | | | |
| 3 | ಚಿಕ್ಕಬಳ್ಳಾಪುರ | 30000/= | | | |
| 4 | ಬೆಂಗಳೂರು (ಗ್ರಾ) | 30000/= | ತುಮಕೂರು ವಿಶ್ವವಿದ್ಯಾನಿಲಯ | ಒಟ್ಟು ರೂ.1,20,000/=ಗಳನ್ನು ಫೈನಾನ್ಸ್ ಆಫೀಸರ್, ತುಮಕೂರು ವಿಶ್ವವಿದ್ಯಾನಿಲಯ ಇವರ ಮೂಲಕ ಚೆಕ್ ಸಂಖ್ಯೆ:224431 ದಿನಾಂಕ:30.03.2022ನ್ನು, ಫೈನಾನ್ಸ್ ಆಫೀಸರ್, ತುಮಕೂರು ವಿಶ್ವವಿದ್ಯಾನಿಲಯ ಇವರ ಎಸ್.ಬಿ.ಐ ಬ್ಯಾಂಕ್ ಖಾತೆ ಸಂಖ್ಯೆ : 54040241380 Tumkur University Branch, B.H Road Tumkur ಗೆ ಜಮಾ ಮಾಡಿದೆ | ಡಾ|| ಪರಶುರಾಮ್ |
| 5 | ಚಿತ್ರದುರ್ಗ | 30000/= | | | |
| 6 | ಕೋಲಾರ | 30000/= | | | |
| 7 | ತುಮಕೂರು | 30000/= | | | |
| 8 | ದಕ್ಷಿಣ ಕನ್ನಡ | 30000/= | ಮಂಗಳೂರು ವಿಶ್ವವಿದ್ಯಾನಿಲಯ | ಒಟ್ಟು ರೂ.60,000/=ಗಳನ್ನು ಫೈನಾನ್ಸ್ ಆಫೀಸರ್, ಮಂಗಳೂರು ವಿಶ್ವವಿದ್ಯಾನಿಲಯ ಇವರ ಮೂಲಕ ಚೆಕ್ ಸಂಖ್ಯೆ:224432 ದಿನಾಂಕ:30.03.2022ನ್ನು, ಫೈನಾನ್ಸ್ ಆಫೀಸರ್, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ನೀಡಲಾಗಿದೆ. | ಪ್ರೊ: [illegible] |
| 9 | ಕೊಡಗು | 30000/= | | | |

| ಕ್ರ ಸಂ | ಜಿಲ್ಲೆ | ಬಿಡುಗಡೆ ಮಾಡಲಾದ ಅನುದಾನ | ಪೈಲಟ್ ಸರ್ವೆ ಕಾರ್ಯಕ್ಕೆ ನಿಯೋಜಿಸಿರುವ ವಿಶ್ವವಿದ್ಯಾನಿಲಯ | ಅನುದಾನ ಬಿಡುಗಡೆ ಮಾಡಿದ ಬ್ಯಾಂಕ್ ಖಾತೆ ವಿವರ | ಸರ್ವೆ ಮುಖ್ಯಸ್ಥ |
|---|---|---|---|---|---|
| 10 | ಚಾಮರಾಜನಗರ | 30000/- | ಮೈಸೂರು ವಿಶ್ವವಿದ್ಯಾಲಯ | **ಒಟ್ಟು ರೂ.60000/-ಗಳನ್ನು** ರಿಜಿಸ್ಟ್ರಾರ್, ಮೈಸೂರು ವಿಶ್ವವಿದ್ಯಾನಿಲಯ ಇವರ ಮೂಲಕ ಚೆಕ್ ಸಂಖ್ಯೆ:224433 ದಿನಾಂಕ:30.03.2022ನ್ನು ರಿಜಿಸ್ಟ್ರಾರ್, ಮೈಸೂರು ವಿಶ್ವವಿದ್ಯಾನಿಲಯ ಇವರ ಖಾತೆ ಸಂಖ್ಯೆ 54007591437, State bank of India, University Campus Branch ಗೆ ಜಮಾ ಮಾಡಿದೆ. | ಡಾ॥ ಡಿ.ಸಿ ನಂಜು |
| 11 | ಮೈಸೂರು | 30000/- | | | |
| 12 | ವಿಜಯಪುರ | 30000/- | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ | **ಒಟ್ಟು ರೂ.60,000/-ಗಳನ್ನು** Finance Officer, RCU Belagavi, ಇವರ ಮೂಲಕ ಚೆಕ್ ಸಂಖ್ಯೆ:224434 ದಿನಾಂಕ:30.03.2022ನ್ನು Finance Officer, RCU Belagavi, ಇವರ Canara Bankನ ಖಾತೆ ಸಂಖ್ಯೆ : 05522200016658 Bhutaramanahatti Belagavi Branch ಗೆ ಜಮಾ ಮಾಡಿದೆ. | ಪ್ರೋ.ಎಸ್.ಎನ ಗಂಗಾಧರಯ್ಯ |
| 13 | ಬೆಳಗಾವಿ | 30000/- | | | |
| 14 | ಬಳ್ಳಾರಿ | 30000/- | ಕನ್ನಡ ವಿಶ್ವವಿದ್ಯಾನಿಲಯ, ಹಂಪಿ | **ಒಟ್ಟು ರೂ.30,000/-ಗಳನ್ನು** ಫೈನಾನ್ಸ್ ಆಫೀಸರ್, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಇವರ ಮೂಲಕ ಚೆಕ್ ಸಂಖ್ಯೆ:224435 ದಿನಾಂಕ:30.03.2022ನ್ನು ಫೈನಾನ್ಸ್ ಆಫೀಸರ್, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಇವರ ಬ್ಯಾಂಕ್ ಆಫ್ ಇಂಡಿಯಾ ಖಾತೆ ಸಂಖ್ಯೆ : 842210100005169 IFSC Code: BKID0008422 Kamalapur Branch ಗೆ ಜಮಾ ಮಾಡಿದೆ. | ಡಾ. ಕೆ.ಸಿ ಶಿವಾ |
| 15 | ಕಲಬುರ್ಗಿ | 30000/- | ಕಲಬುರ್ಗಿ ವಿಶ್ವವಿದ್ಯಾನಿಲಯ | **ಒಟ್ಟು ರೂ.120,000/-ಗಳನ್ನು** ಫೈನಾನ್ಸ್ ಆಫೀಸರ್, ಕಲಬುರ್ಗಿ ವಿಶ್ವವಿದ್ಯಾನಿಲಯ, ಇವರ ಮೂಲಕ ಚೆಕ್ ಸಂಖ್ಯೆ:224436 ದಿನಾಂಕ:30.03.2022ನ್ನು ಫೈನಾನ್ಸ್ ಆಫೀಸರ್, ಕಲಬುರ್ಗಿ ವಿಶ್ವವಿದ್ಯಾನಿಲಯ ಇವರಿಗೆ | ಡಾ. ಸಿಂಧೆ ಜಗನ್ನಾಥ್ |
| 16 | ಯಾದಗಿರಿ | 30000/- | | | |
| 17 | ರಾಯಚೂರು | 30000/- | | | |
| 18 | ಬೀದರ್ | 30000/- | | | |

| ಕ್ರ ಸಂ | ಜಿಲ್ಲೆ | ಬಿಡುಗಡೆ ಮಾಡಲಾದ ಅನುದಾನ | ಪೈಲಟ್ ಸರ್ವೆ ಕಾರ್ಯಕ್ಕೆ ನಿಯೋಜಿಸಿರುವ ವಿಶ್ವವಿದ್ಯಾನಿಲಯ | ಅನುದಾನ ಬಿಡುಗಡೆ ಮಾಡಿದ ಬ್ಯಾಂಕ್ ಖಾತೆ ವಿವರ | ಸರ್ವೆ ಮುಖ್ಯಸ್ಥರು |
|---|---|---|---|---|---|
| 19 | ಉತ್ತರ ಕನ್ನಡ | 30000/- | ಕರ್ನಾಟಕ ವಿಶ್ವವಿದ್ಯಾನಿಲಯ. ಧಾರವಾಡ. | ಒಟ್ಟು ರೂ.30,000/-ಗಳನ್ನು Finance Officer, Karnatak University, Dharwad, Research Project Account, ಇವರ ಮೂಲಕ ಚೆಕ್ ಸಂಖ್ಯೆ:224437 • ದಿನಾಂಕ:30.03.2022ನ್ನು Finance Officer, Karnatak University, Dharwad, ಇವರ ಖಾತೆ ಸಂಖ್ಯೆ: 12062200006614, Canara Bank IFSC Code: CNRB0011206, Dharwad University Campus Branch ಗೆ ಜಮಾ ಮಾಡಿದೆ | ಡಾ॥ ಆರ್ .ಆರ್. ಬಿರಾದಾರ್ |

ಮೇಲ್ಕಂಡ ಮೊತ್ತದಲ್ಲಿ ಸರ್ವೆಗೆ ನಿಯೋಜಿಸಲ್ಪಟ್ಟ ಅಧಿಕಾರಿ ಅಥವಾ ಸರ್ವೆ ಮುಖ್ಯಸ್ಥರಿಗೆ ಮೊದಲ ಕಂತಿನಲ್ಲಿ ಅರ್ಧದಷ್ಟು ಮೊತ್ತವನ್ನು ಮಾತ್ರ ಬಿಡುಗಡೆ ಮಾಡಿ ಉಳಿದ ಮೊತ್ತವನ್ನು ಭರ್ತಿ ಮಾಡಲ್ಪಟ್ಟ ಷೆಡ್ಯೂಲ್‌ಗಳು ಹಂಪಿ ವಿಶ್ವವಿದ್ಯಾನಿಲಯಕ್ಕೆ ಹಾಗೂ ಗಡಿ ಪ್ರಾಧಿಕಾರಕ್ಕೆ ತಲುಪಿಸಿದ ನಂತರ ಸ್ವೀಕೃತಿಯ ಆಧಾರದ ಮೇಲೆ ಉಳಿಕೆ ಮೊತ್ತ ಬಿಡುಗಡೆಗೊಳಿಸಲು ಕ್ರಮ ತೆಗೆದುಕೊಳ್ಳುವುದು.

ಅಧ್ಯಕ್ಷರು, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಇವರಿಂದ ಅನುಮೋದಿಸಲ್ಪಟ್ಟಿದೆ.

30/3

ಕಾರ್ಯದರ್ಶಿ

<u>ಪ್ರತಿಯನ್ನು ಗೌರವಪೂರ್ವಕವಾಗಿ ಹಾಗೂ ಮಾಹಿತಿಗೆ ಸಲ್ಲಿಸಿದೆ.</u>

1. ಸನ್ಮಾನ್ಯ ಉಪ ಕುಲಪತಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ
2. ಸನ್ಮಾನ್ಯ ಉಪಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾನಿಲಯ, ಜ್ಞಾನಗಂಗೋತ್ರಿ, ಬೆಂಗಳೂರು.
3. ಸನ್ಮಾನ್ಯ ಉಪಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.
4. ಸನ್ಮಾನ್ಯ ಉಪಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ.
5. ಸನ್ಮಾನ್ಯ ಉಪಕುಲಪತಿಗಳು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಬಳ್ಳಾರಿ ಜಿಲ್ಲೆ.
6. ಸನ್ಮಾನ್ಯ ಉಪಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ.
7. ಸನ್ಮಾನ್ಯ ಉಪಕುಲಪತಿಗಳು, ಕಲಬುರ್ಗಿ ವಿಶ್ವವಿದ್ಯಾನಿಲಯ.
8. ಸನ್ಮಾನ್ಯ ಉಪಕುಲಪತಿಗಳು, ತುಮಕೂರು ವಿಶ್ವವಿದ್ಯಾನಿಲಯ.
9. ಸಂಬಂಧಪಟ್ಟ ಎಲ್ಲಾ ಸರ್ವೆ ಕಾರ್ಯದ ಮುಖ್ಯಸ್ಥರಿಗೆ –ಇವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
10. ಸಂಬಂಧಪಟ್ಟ ಎಲ್ಲಾ ವಿಶ್ವವಿದ್ಯಾನಿಲಯದ ಫೈನಾನ್ಸ್ ಆಫೀಸರುಗಳಿಗೆ – ಇವರಿಗೆ ಮಾಹಿತಿಗಾಗಿ ಹಾಗೂ ಸದರಿ ಅನುದಾನವನ್ನು ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಸರ್ವೆ ಕಾರ್ಯದ ಮುಖ್ಯಸ್ಥರಿಗೆ ಬಿಡುಗಡೆ ಮಾಡಲು ಕೋರಿದೆ.